# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **402** |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19-08-2026 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಮತ್ತು ಪ್ರವಾಸೋದ್ಯಮ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ವ್ಯಾಪ್ತಿಯ ವಾರ್ಡ್ ನಂ.88 ಜೀವನ್ ಭೀಮಾನಗರದಲ್ಲಿ ಎರಡು 220 ಕೆ.ವಿ. ಲೈನ್ ಇರುವ ಕಾರಣ 2018ರಲ್ಲಿ ಪೈಪ್ ಕಲ್ವರ್ಟ್ ಬ್ರಿಡ್ಜನ್ನು ಸೆಗ್ಮೆಂಟಲ್ ಬ್ರಿಡ್ಜ್ ಆಗಿ ನಿರ್ಮಿಸುವ ಕಾಮಗಾರಿ ಸ್ಥಗಿತಗೊಂಡು ಅಲ್ಲಿನ ನಿವಾಸಿಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ 220 ಕೆ.ವಿ. ಲೈನ್ ಅನ್ನು ಸ್ಥಳಾಂತರಿಸಲು ಕೆಪಿಟಿಸಿಎಲ್ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು; | ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ದೊಮ್ಮಲೂರು ಜಂಕ್ಷನ್‌ನಲ್ಲಿ ಅಸ್ತಿತ್ವದಲ್ಲಿರುವ 1000 ಚ.ಮಿ.ಮೀ. 220 ಕೆ.ವಿ. HAL-EDC ಸಿಂಗಲ್ ಸರ್ಕ್ಯೂಟ್ (SC) ಭೂಗತ ಕೇಬಲ್ ಅನ್ನು ಬಿ.ಬಿ.ಎಂ.ಪಿ. ವತಿಯಿಂದ ಸ್ವಯಂ ನಿರ್ವಹಣಾ (Self Execution) ಆಧಾರದ ಅಡಿಯಲ್ಲಿ ಸ್ಥಳಾಂತರಿಸಲು ಮೆ:ಬಿ.ಬಿ.ಎಂ.ಪಿರವರು ದಿನಾಂಕ 09.09.2022 ರಂದು ಕೋರಿರುತ್ತಾರೆ.<br><br>ಸದರಿ ಕಾಮಗಾರಿಯನ್ನು ಸ್ವಯಂ ನಿರ್ವಹಣಾ (Self Execution) ಆಧಾರದ ಅಡಿಯಲ್ಲಿ ಕೈಗೊಳ್ಳಲು ಕವಿಪ್ರನಿನಿಯು ದಿನಾಂಕ: 17.06.2023 ರಂದು ಅನುಮೋದನೆ ನೀಡಲಾಗಿರುತ್ತದೆ.<br><br>ತದನಂತರ, ಅನುಮೋದನೆ ಪ್ರಕಾರ, ದಿನಾಂಕ 02.08.2023 ರಂದು ಪಾವತಿಸಬೇಕಾದ ಮೇಲ್ವಿಚಾರಣೆಯ ಮೊತ್ತವನ್ನು ಪಾವತಿಸುವಂತೆ ಸೂಚನಾ ಪತ್ರವನ್ನು ನೀಡಲಾಗಿರುತ್ತದೆ.<br><br>ಸದರಿ ಮೊತ್ತವನ್ನು ಮೆ\|\| ಬಿ.ಬಿ.ಎಂ.ಪಿ. ರವರು ಇದುವರೆಗೂ ಪಾವತಿಸಿರುವುದಿಲ್ಲ ಹಾಗೂ ಈವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. |
| ಆ) | ಸುಮಾರು ಐದು ವರ್ಷ ಕಳೆದರೂ ಸಹ 220 ಕೆ.ವಿ. ಲೈನ್ ಸ್ಥಳಾಂತರಿಸದೇ ವಿಳಂಬವಾಗಲು ಕಾರಣವೇನು; | |
| ಇ) | ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಸ್ಥಳದಲ್ಲಿ ಪೈಪ್ ಕಲ್ವರ್ಟ್ ಬ್ರಿಡ್ಜನ್ನು ಸೆಗ್ಮೆಂಟಲ್ ಬ್ರಿಡ್ಜ್ ಆಗಿ ನಿರ್ಮಿಸಲು ಅನುವಾಗುವಂತೆ 220 ಕೆ.ವಿ ಲೈನನ್ನು ಯಾವ ಕಾಲಮಿತಿಯಲ್ಲಿ ಸ್ಥಳಾಂತರಿಸಲಾಗುವುದು? | |

ಸಂಖ್ಯೆ: ಎನರ್ಜಿ 204 ಇಬಿಎಸ್ 2026

(ಕೆ.ಜೆ.ಜಾರ್ಜ್)
ಮಾನ್ಯ ಇಂಧನ ಮತ್ತು ಪ್ರವಾಸೋದ್ಯಮ ಸಚಿವರು